ಬಾಗೇಪಲ್ಲಿ ಪಟ್ಟಣದಲ್ಲಿ ಮುಖ್ಯ ರಸ್ತೆ ಜಾಗದ ಅಗಲೀಕರಣ

1020 (853) ಶ್ರೀ ಸಂಪಂಗಿ. ಎನ್. (ಬಾಗೇಪಲ್ಲಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ಮುಖ್ಯ ರಸ್ತೆಯಲ್ಲಿ ಜಾಗವನ್ನು ಅಗಲೀಕರಣ ಮಾಡಿದ್ದು, ರಸ್ತೆ ಅಗಲೀಕರಣ ಮಾಡಿ ಹಲವಾರು ತಿಂಗಳುಗಳು ಸಹ ಕಳೆದಿದ್ದರೂ ಇಲ್ಲಿನ ತ್ಯಾಜ್ಯ ವಸ್ತುಗಳನ್ನು, ಕಂಬಗಳನ್ನು ಬೇರೆ ಕಡೆಗೆ ಸಾಗಿಸದೇ ಹಾಗೆಯೇ ಉಳಿಸಿರುವುದು ಇದರಿಂದ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮವನ್ನು ಕೈಗೊಳ್ಳಲಾಗುವುದು;

ಆ) ಬಾಗೇಪಲ್ಲಿ–ಬಂಗಾರಪೇಟೆ ರಸ್ತೆಯು ತುಂಬಾ ಹದಗೆಟ್ಟಿದ್ದು, ಇದರಿಂದ ಸಂಚಾರಕ್ಕೆ ತುಂಬಾ ತೊಂದರೆಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತುರ್ತಾಗಿ ಕೈಗೊಳ್ಳುವ ಕ್ರಮವೇನು;

ಇ) ಚೇಳೂರು ಮತ್ತು ಬಾಗೇಪಲ್ಲಿ ರಸ್ತೆ ಗಡಿ ನಾಡು ಪ್ರದೇಶದಲ್ಲಿದ್ದು, ಈ ರಸ್ತೆಯು ತುಂಬಾ ಹದಗೆಟ್ಟಿದ್ದು ಇದರಿಂದ ಸಾರ್ವಜನಿಕರಿಗೆ, ನಾಗರಿಕರುಗಳಿಗೆ, ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ನಿಜವಲ್ಲವೇ; ಇದರ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕೈಗೊಳ್ಳುವ ಮುಂದಿನ ಕ್ರಮವೇನು; ಇದಕ್ಕಾಗಿ ಎಷ್ಟು ಅನುದಾನವನ್ನು ವ್ಯಯ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಾಗೇಪಲ್ಲಿ ಮುಖ್ಯ ರಸ್ತೆಯಾದ ಬಂಗಾರುಪೇಟೆ–ಬಾಗೇಪಲ್ಲಿ ರಾಜ್ಯ ಹೆದ್ದಾರಿ–5 ರಸ್ತೆಯನ್ನು ಬಾಗೇಪಲ್ಲಿ ಪಟ್ಟಣ ಪರಿಮಿತಿಯಲ್ಲಿ ಅಗಲೀಕರಣ ಮಾಡಿದ್ದು, ಅಗಲೀಕರಣದ ಸಂಧರ್ಭದಲ್ಲಿ ಬಿದ್ದಿದ್ದ ತ್ಯಾಜ್ಯ ವಸ್ತುಗಳನ್ನು ಈಗಾಗಲೇ ಸ್ಥಳಾಂತರಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ವಿದ್ಯುತ್ ಕಂಬಗಳನ್ನು ಬೇರೆ ಕಡೆಗೆ ಸಾಗಿಸುವ ಕುರಿತು ದಿನಾಂಕ: 22.11.2011 ರಂದು ಬೆಸ್ಕಾಂ ಅಧಿಕಾರಿಗಳು ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಚರ್ಚಿಸಿದಂತೆ, ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ತಗಲುವ ವೆಚ್ಚದಲ್ಲಿ ಶೇಕಡ 50 ರಷ್ಟು ಮೊತ್ತವನ್ನು ಇಲಾಖೆಯಿಂದ ಭರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಬಂಗಾರಪೇಟೆ–ಬಾಗೇಪಲ್ಲಿ ರಸ್ತೆಯು ಬಾಗೇಪಲ್ಲಿ ಉಪ ವಿಭಾಗದ ವ್ಯಾಪ್ತಿಯಲ್ಲಿ ಸರಪಳಿ 87.70 ರಿಂದ 106.80 ಕಿ.ಮೀ.ವರೆಗೆ ಒಟ್ಟು 19.10 ಕಿ.ಮೀ. ಉದ್ಧವಿದ್ದು, 2011–12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054–ರಾಜ್ಯ ಹೆದ್ದಾರಿ ನಿರ್ವಹಣೆಯಡಿ ಒದಗಿಸಲಾಗಿರುವ ರೂ. 6.30 ಲಕ್ಷಗಳ ಅನುದಾನದಲ್ಲಿ ಸದರಿ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿ ವಾಹನ ಸಂಚಾರಕ್ಕೆ ಯೋಗ್ಯವಾಗಿಡಲು ಕ್ರಮ ಕೈಗೊಳ್ಳಲಾಗಿದೆ.

2011–12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054–03–337–0–13–172 ಯೋಜನೆ–ರಾಜ್ಯ ಹೆದ್ದಾರಿ ನವೀಕರಣ ಅಡಿ ಬಂಗಾರಪೇಟೆ–ಬಾಗೇಪಲ್ಲಿ ರಸ್ತೆಯ ಸರಪಳಿ 87.70 ರಿಂದ 100.07 ಕಿ.ಮೀ. ವರೆಗೆ ಒಟ್ಟು 12.37 ಕಿ.ಮೀ. ಉದ್ದದ ರಸ್ತೆಯನ್ನು ರೂ.164.07 ಲಕ್ಷಗಳ ಅಂದಾಜು ಮೊತ್ತದಲ್ಲಿ ನವೀಕರಿಸಲು ಹಾಗೂ ಬಾಗೇಪಲ್ಲಿ ಪಟ್ಟಣ ಪರಿಮಿತಿಯಲ್ಲಿ ರಸ್ತೆಯ ಎಡ ಹಾಗೂ ಬಲಭಾಗದಲ್ಲಿ ಒಟ್ಟು 3.20 ಕಿ.ಮೀ. ಉದ್ದಕ್ಕೆ ಕಲ್ಲು ಕಟ್ಟಡದ ಚರಂಡಿ ನಿರ್ಮಿಸಲು ರೂ.140.42 ಲಕ್ಷಗಳ ಅಂದಾಜು ಮೊತ್ತದಲ್ಲಿ ಡಾ:ನಂಜುಂಡಪ್ಪ ವರದಿ ಲೆಕ್ಕಶೀರ್ಷಿಕೆಯಡಿ ಕೈಗೊಳ್ಳಲಾಗುತ್ತಿದ್ದು, ಪ್ರಸ್ತುತ ಈ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಅನುಮೋದನೆ ಹಂತದಲ್ಲಿದ್ದು, ಕಾಮಗಾರಿಗಳನ್ನು ಶೀಘ್ರವಾಗಿ ಕಾರ್ಯಗತಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸದರಿ ರಸ್ತೆಯ ಸರಪಳಿ 103.50 ರಿಂದ 106.80 ಕಿ.ಮೀ.ವರೆಗೆ ಬಾಗೇಪಲ್ಲಿ ಪಟ್ಟಣ ಪರಿಮಿತಿಯಲ್ಲಿ ರಸ್ತೆ ಅಗಲಪಡಿಸಿ ಅಭಿವೃದ್ಧಿಗೊಳಿಸಲು ರೂ.960.00 ಲಕ್ಷಗಳ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಯಲ್ಲಂಪಲ್ಲಿ–ಚೇಳೂರು ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಬಾಗೇಪಲ್ಲಿ ಉಪವಿಭಾಗದ ವ್ಯಾಪ್ತಿಯಲ್ಲಿ ಸರಪಳಿ 0.00 ರಿಂದ 33.30 ಕಿ.ಮೀ ಉದ್ಧವಿದ್ದು, ಸರಪಳಿ 0.00 ರಿಂದ 32.00 ಕಿಮೀ ವರೆಗೆ ರಸ್ತೆಯು ಉತ್ತಮವಾಗಿದ್ದು, ಸರಪಳಿ 32.00 ರಿಂದ 33.30 ಕಿ.ಮೀ. ವರೆಗೆ ರಸ್ತೆಯು ಹದಗೆಟ್ಟಿದ್ದು, 2011–12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 – ಯೋಜನೇತರ 13ನೇ ಹಣಕಾಸು ಯೋಜನೆಯಡಿ ಒದಗಿಸಲಾಗಿರುವ ರೂ.5.72 ಲಕ್ಷಗಳ ಅನುದಾನದಲ್ಲಿ ರಸ್ತೆಯ ಗುಂಡಿಗಳನ್ನು ಮುಚ್ಚಿ ವಾಹನ ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆ.